ಹೆಚ್ಚುವರಿ ಸಿವಿಲ್ ಮತ್ತು ಜೆ.ಎಮ್. ಎಫ್. ಸಿ ನ್ಯಾಯಾಧೀಶರ ನ್ಯಾಯಾಲಯ ಯಾದಗಿರಿ.

ಸಿಸಿ ನಂ. **340/2020**

| | | |
|---|---|---|
| ಸಾಕ್ಷಿಯ ಹೆಸರುಃ | ಚಂದರ | ಪ್ರಾಸಾಃ 3 |
| ತಂದೆ/ಗಂಡನ ಹೆಸರುಃ | ಸೋಮುನಾಯಕ | ಚಾಸಾಃ 2 |
| ವಯಸ್ಸು ಃ | 60 ವರ್ಷ | ದಿಃ 17-10-2025 |
| ಉದ್ಯೋಗಃ | ಕೂಲಿಕೆಲಸ | ಸಾಕ್ಷಿದಾರರಿಗೆ ಪ್ರಮಾಣ ವಚನ ಭೋದಿಸಲಾಯಿತು. |
| ವಾಸ ಸ್ಥಳಃ | ಸೈದಾಪೂರ | |

ಮುಖ್ಯ ವಿಚಾರಣೆ ಮಾನ್ಯ ಸಹಾಯಕ ಸರ್ಕಾರಿ ಅಬಿಯೋಜಕರವರಿಂದಃ

ನನಗೆ ಚಾಸಾಃ 3 ರವರ ಪರಿಚಯ ಇದೆ. ನನಗೆ ಆರೋಪಿತಳ ಪರಿಚಯ ಇದೆ. ನನಗೆ ಈ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇಲ್ಲ. ನಾನು ಪೋಲಿಸರ ಮುಂದೆ ಯಾವುದೇ ಹೇಳಿಕೆಯನ್ನು ನುಡಿದಿರುವುದಿಲ್ಲ. ಯಾವ ದಿನದಂದು ಏನು ಆಗಿದೆ ಎಂದು ಗೊತ್ತಿಲ್ಲ. ಸಾಕ್ಷಿಗೆ ಒಂದು ದಾಖಲಾತಿಯನಮ್ಮ ತೋರಿಸಲಾಗಿ ಅದು ಜಪ್ತಿ ಪಂಚನಾಮೆಯಾಗಿದ್ದು ಅದನ್ನು ಸಾಕ್ಷಿಯು ನೋಡಿ ಗುರುತಿಸಿರುವುದರಿಂದ ಅದನ್ನು ಈಗಾಗಲೇ ನಿಪಿ-1 ಎಂದು, ಸಾಕ್ಷಿಯ ತನ್ನ ಹೆಬ್ಬೆಟ್ಟಿನ ಗುರುತನ್ನು ನೋಡಿ ಗುರುತಿಸಿಕೊಂಡಿರುತ್ತಾನೆ. ನಿಪಿ-1 ರಲ್ಲಿ ಏನು ಬರೆದಿರುತ್ತಾರೆ ಎಂಬುದರ ಬಗ್ಗೆ ಮಾಹಿತಿ ನನಗೆ ಇಲ್ಲ.

(ಈ ಹಂತದಲ್ಲಿ ಸಾಕ್ಷಿಯು ಪ್ರತಿಕೂಲ ಸಾಕ್ಷಿ ನುಡಿದಿದ್ದರಿಂದ ಮಾನ್ಯ ಸರಕಾರಿ ಸಹಾಯಕ ಅಭೀಯೋಜಕರವರು ಪಾಟಿ ಸವಾಲು ಮಾಡಲು ಅನುಮತಿಯನ್ನು ಕೋರಿದ್ದು ನ್ಯಾಯಾಲಯದ ಮುಂದೆ ಇರುವ ದಾಖಲಾತಿಗಳನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು.)

ದಿನಾಂಕ 01.05.2020 ರಂದು ಮದ್ಯಾಹ್ನ 1.30 ಗಂಟೆಗೆ ನನಗೆ ಮತ್ತು ಚಾಸಾಃ 3 ರವರನ್ನು ಪೋಲಿಸರು ಜಪ್ತಿ ಪಂಚನಾಮೆ ಸಾಕ್ಷಿದಾರಾಗಿ ಕರೆಸಿರುತ್ತಾರೆ ಎಂದರೆ ಸರಿಯಲ್ಲ. ನಮ್ಮ ಸಮಕ್ಷಮದಲ್ಲಿ ನಿಪಿ-1 ರಂತೆ ಜಪ್ತಿ ಪಂಚನಾಮೆ ಜರುಗಿಸಿರುತ್ತಾರೆ ಅಂದರೆ ಸರಿಯಲ್ಲ. ಆರೋಪಿತರಿಗೆ ಸಹಾಯ ಮಾಡುವ ಉದ್ದೇಶದಿಂದ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟಿ ಸವಾಲುಃ ಆರೋಪಿ ಪರ ವಕೀಲರು ಶ್ರೀ. ಎಸ್. ಎಸ್. ಎ. ಇವರಿಂದ ಇಲ್ಲ

ಮರು ವಿಚಾರಣೆಃ ಇಲ್ಲ

(ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು).

ಓ. ಹೇ. ಕೇ. ಸರಿ ಇದೆ.

ಹೆಚ್ಚುವರಿ ಸಿವಿಲ್ ಮತ್ತು ಜೆಎಂಎಫ್‌ಸಿ
ನ್ಯಾಯಾಧೀಶರು ಯಾದಗಿರಿ